**<u>ಸಾಕ್ಷಿಯನ್ನು ದಿಃ 14.10.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಸಿ ವಕೀಲರಿಂದಃ-</u>**

ನಿಡಿ. 1 ಮತ್ತು 53 ಗಳಲ್ಲಿ ಮಾರಾಟಗಾರರ ಸಹಿಗಳಾಗಲಿ, ಖರೀದಿ ಮಾಡಿದವರ ಸಹಿಗಳಾಗಲಿ, ಸಾಕ್ಷಿದಾರರ ಸಹಿಯಾಗಲಿ ಮತ್ತು ಬಿಕ್ರದಾರರ ಸಹಿಗಳಾಗಲಿ ಒಂದೇ ರೀತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿಡಿ. 53 ರ ಸೇಲ್ ಡೀಡ್ ನ ಪ್ರತಿ ಪೇಜ್ ನಲ್ಲಿ ನನ್ನ ಸಹಿ ಇಲ್ಲ ಎಂದರೆ ಆ ಸಮಯದಲ್ಲಿ ಕೊನೆಯ ಪುಟ್ಟದಲ್ಲಿ ಸಹಿ ಮಾಡಬೇಕೆಂದು ಸಬ್ ರಿಜಿಸ್ಟ್ರಾರ್ ಕಛೇರಿಯ ನಿಯಮ ಇತ್ತು ಎನ್ನುತ್ತಾರೆ. ಆ ಬಗ್ಗೆ ದಾಖಲೆ ಕೊಡಲು ಸಾಧ್ಯ ಇದೆಯಾ ಎಂದರೆ ಆ ಸಮಯದಲ್ಲಿ ಸಬ್ ರಿಜಿಸ್ಟ್ರಾರ್ ರವರು ಮೌಖಿಕವಾಗಿ ಹೇಳಿದ ಕಾರಣ ಕೊನೆಯ ಪುಟದಲ್ಲಿ ಸಹಿ ಮಾಡಲಾಗಿತ್ತು ಎನ್ನುತ್ತಾರೆ. ಆ ರೀತಿ ಸಬ್ ರಿಜಿಸ್ಟ್ರಾರ್ ರವರು ಹೇಳದಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ. 53 ರಲ್ಲಿ 2 ನೇ ಖರೀದಿದಾರರ ಈಶ್ವರ ರವರ ಸಹಿ ಇಲ್ಲ ಎಂದರೆ ಸರಿ, ಅವರು ಜಿ.ಪಿ.ಎ ಕೊಟ್ಟ ಕಾರಣ ಸಹಿ ಇರುವುದಿಲ್ಲ ಎನ್ನುತ್ತಾರೆ. 1997 ರಲ್ಲಿ ಈಶ್ವರ ರವರು ಜಿ.ಪಿ.ಎ ಕೊಟ್ಟ ದಾಖಲೆ ಹಾಜರುಪಡಿಸಿದ್ದೇನೆ. ನಿಡಿ. 1 ರಲ್ಲಿ ಕಾಣಿಸುವ ನನ್ನ ಸಹಿಗೂ ಮತ್ತು ನಿಡಿ. 53 ರಲ್ಲಿ ಇರುವ ನನ್ನ ಸಹಿ ಒಂದೇ ರೀತಿಯಲ್ಲಿ ಇಲ್ಲ ಎಂದರೆ ನಿಡಿ. 1 ರಲ್ಲಿ ಸಹಿ ಕಾಣಿಸುತ್ತಿಲ್ಲ ಎನ್ನುತ್ತಾರೆ. ನಿಡಿ. 53 ರ ತದನಂತರ ನಾವು ಸೃಷ್ಟಿಸಿಕೊಂಡ ದಾಖಲೆ ಎಂದರೆ ಸರಿಯಲ್ಲ. ಸದರಿ ದಾಖಲೆ ಸಬ್ ರಿಜಿಸ್ಟ್ರಾರ್ ರವರ ಕಛೇರಿಯಲ್ಲಿ ನೊಂದಣಿ ಆಗಿಲ್ಲ ಎಂದರೆ ಸರಿಯಲ್ಲ. ನಿಡಿ. 53 ರ ದಾಖಲೆ ಹೊರತು ಮತ್ತಾವುದು ಅಸಲು ದಾಖಲೆ ಇಲ್ಲ. ನಿಡಿ. 53 ರ ಸ್ಟಾಂಪ್ ಪೇಪರ್ ಗಳನ್ನು ಯಾರ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎಂದರೆ ಗೊತ್ತಿಲ್ಲ, ಆದರೆ ಮಾರಾಟಗಾರರು ಖರೀದಿ ಮಾಡಿದ್ದರು ಎನ್ನುತ್ತಾರೆ.

ನಿಡಿ. 26 ರ ನಾನು ಕರಯ ಪತ್ರ ಮಾಡಿಸಿಕೊಳ್ಳುವ ಮೊದಲ ಆದ ಸ್ಥಳ ತನಿಖೆ ಎಂದರೆ ಇರಬಹುದು. ಸದರಿ ಸ್ಥಳ ತನಿಖೆಯ ವರದಿಯ ಪ್ರಕಾರ ಪೂರ್ವಕ್ಕೆ ಮತ್ತು ಪಶ್ಚಮಕ್ಕೆ ಮಹಿ ಮಹೇಶ್ ರವರ ನಿವೇಶನದ

ಪ್ರದೇಶ, ಉತ್ತರಕ್ಕೆ ಸಣ್ಣಯ್ಯ ರವರ ಜಮೀನು, ದಕ್ಷಿಣಕ್ಕೆ ಮಹಿ ಮಹೇಶ್ ರವರ ಜಮೀನು ಇದೆ ಎಂದರೆ ಸರಿ. ಸದರಿ ದಾಖಲೆ ಪ್ರಕಾರ ಸ್ಥಳ ತನಿಖೆ ಯಾವ ದಿನಾಂಕದಂದು ಮಾಡಿದ್ದಾರೆ ಎಂಬ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಅದೆ ರೀತಿ ನಿಡಿ. 24 ಮಹಜರ್ ಅನ್ನು ಯಾವ ದಿನಾಂಕದಂದು ಮಾಡಲಾಗಿದೆ ಎಂಬ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ ಪುನಃ ಅಲಿನೇಶನ್ ಮಾಡಿಸಿದ ನಂತರ ನಾವು ಖರೀದಿ ಮಾಡಿದ್ದೇವೆ ಅದಕ್ಕೂ ಪೂರ್ವದಲ್ಲಿ ಹಾಗೆ ಮಹಜರ್ ಮಾಡಿಸಿದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ. 25 ರ ಮಹಜರ್ ನಲ್ಲಿ ಇರುವ ಸಹಿಗಳು ಚನ್ನಮ್ಮ ಮತ್ತು ಕಾಳಯ್ಯ ನವರದ್ದಾ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಡಿ. 19 ರ ಮುಚ್ಚಳಿಕೆಯಲ್ಲಿ ಇರುವ ಸಹಿಗಳು ಚನ್ನಮ್ಮ ಮತ್ತು ಕಾಳಯ್ಯ ರವರದ್ದಾಗಿದೆ ಅದನ್ನು ಸಾಕ್ಷಿ ನೋಡಿ ಆ ಬಗ್ಗೆ ನನಗೆ ಗೊತ್ತಿಲ್ಲ ಅದನ್ನು ಅಸಿಸ್ಟೆಂಟ್ ಕಮೀಷನರ್ ಮುಂದೆ ಮಾಡಿರುತ್ತಾರೆ. ಸದರಿ ಮುಚ್ಚಳಿಕೆಯನ್ನು ಯಾವ ದಿನಾಂಕದಂದು ಮಾಡಿದ್ದರು ಎಂದು ದಿನಾಂಕ ನಮೂದು ಇಲ್ಲ ಎಂದರೆ ಸರಿ. ನಿಡಿ. 31 ಕನ್ವರ್ಶನ್ ಗೆ ಹಾಕಿದಂತಹ ಅರ್ಜಿ ಇದೆನಾ ಎಂದರೆ ಮಾರಾಟಗಾರರು ಅದನ್ನು ಹಾಗೆ ಕೊಟ್ಟಿದ್ದರು ಎನ್ನುತ್ತಾರೆ. ಅದರಲ್ಲೂ ಕೂಡ ಯಾವ ದಿನಾಂಕದಂದು ಅರ್ಜಿ ಸಲ್ಲಿಸಿದ್ದರು ಎಂದು ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಅಲಿನೇಶನ್ ಆದೇಶವನ್ನು ನಾನು ರಿಜಿಸ್ಟ್ರೇಶನ್ ಮಾಡಿಸಿಕೊಳ್ಳುವ ಪೂರ್ವದಲ್ಲೆ ನೋಡಿದ್ದೆ. ಹಾಗೆ ಎಷ್ಟು ದಿನದ ಮೊದಲು ಹಾಗೆ ನೋಡಿದ್ದೆ ಎಂದರೆ ನನಗೆ ನೆನಪಿಲ್ಲ.

ನಿಡಿ.27 ಹಿಂಬಹರವು ಯಾರು ಕನ್ವರ್ಶನ್ ಗಾಗಿ ಅರ್ಜಿ ಕೊಟ್ಟಿದ್ದರೊ ಅವರಿಗೆ ನೀಡಿದಂತಹ ಹಿಂಬರಹ ಎಂದರೆ ಇರಬಹುದು. ಅದನ್ನು ಕರಿಬಸಪ್ಪ ರವರ ಮಗ ಹೆಚ್. ಕೆ. ಪ್ರಕಾಶ್ ರವರಿಗೆ ನೀಡಿದಂತಹ ಹಿಂಬರಹ ಎಂದರೆ ಇರಬಹುದು. ನನಗೆ ಮಾರಾಟ ಮಾಡಿದ್ದರು ಎಂದು ಹೇಳುವ ಮಾರಾಟಗಾರರು ಆ ಸಮಯದಲ್ಲಿ ಅರ್ಥಿಕವಾಗಿ ಸ್ಥಿತಿವಂತರಿದ್ದರೊ ಅಥವಾ ದುರ್ಬಲರಿದ್ದರೊ ಎಂದರೆ ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ನಿಡಿ. 28 ರ ಪ್ರಕಾರ ಚನ್ನಮ್ಮ ಮತ್ತು ಕಾಳಯ್ಯ ರವರು ರೂ. 60,495/- ನೀಡಿರುವಂತಹದ್ದಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಕ್ರಯ ಪತ್ರ ಆದ ಎಷ್ಟು ದಿನಗಳ ಮೊದಲು ನಾನು

ಅಡ್ವಾನ್ಸ್ ಹಣ ಕೊಟ್ಟಿದ್ದೆ ಎಂದು ನನಗೆ ನೆನಪಿಲ್ಲ. ಮುಂಗಡ ಹಣ ಎಂದು ಎಷ್ಟು ಕೊಟ್ಟಿದ್ದೆ ಎಂದು ಈಗ ನನಗೆ ನೆನಪಿಲ್ಲ. ಮುಂಗಡ ಹಣ ಕೊಟ್ಟ ಬಗ್ಗೆ ಯಾವುದೆ ದಾಖಲೆ ಮಾಡಿಕೊಂಡಿಲ್ಲ. ನಾನು ಮುಂಗಡ ಹಣ ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಡ್ವಾನ್ಸ್ ಮತ್ತು ಸೇಲ್ ಕನ್ಸಿಡರೇಶನ್ ಹಣ ಕೊಟ್ಟ ಬಗ್ಗೆ ಕ್ರಯ ಪತ್ರದಲ್ಲಿ ತೋರಿಸಲಾಗಿದೆ. ಹಾಗೆ ಹಣ ಕೊಟ್ಟ ಬಗ್ಗೆ ನಿಡಿ. 53 ರ 3 ನೇ ಪುಟದಲ್ಲಿ ನಮೂದು ಇದೆ. ಹಾಗೆ ಸೇಲ್ ಕನ್ಸಿಡರೇಶನ್ ಹಣ ಕೊಟ್ಟ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಡಿ. 28 ರ ಪ್ರಕಾರ ಚನ್ನಮ್ಮ ಮತ್ತು ಕಾಳಯ್ಯ ರವರಿಗೆ ಯಾವುದೆ ಪೇಮೆಂಟ್ ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಕನ್ವರ್ಶನ್ ಆದೇಶದ ನಂಬರ್. 65/1997-98 ಎಂದರೆ ಸರಿ.ನಿಡಿ. 12 ಮತ್ತು 13 ಅಲಿನೇಶನ್ ನಂ. 172/1996-97 ಎಲ್ಲಿದೆ ಎಂದರೆ ಸಾಕ್ಷಿ 6-7 ಸರ್ವೆ ನಂ.ಳು ಜಮೀನು ತೆಗೆದುಕೊಂಡಿದ್ದು ಅದರಲ್ಲಿ ಸರ್ವೆ ನಂ. ಗಳನ್ನು ನಮೂದು ಮಾಡಿದ್ದಾರೆ ಎಂದು ನುಡಿಯುತ್ತಾರೆ.ನಿಡಿ. 12 ರಲ್ಲಾಗಲಿ ಅಥವಾ 13 ರಲ್ಲಾಗಲಿ ಅಲಿನೇಶನ್ ನಂ.67/1996-97 ಎಂದು ನಮೂದು ಇಲ್ಲ ಎಂದರೆ ಸಾಕ್ಷಿ ಅದು ಪಂಚಾಯಿತಿ ದಾಖಲೆ ಎನ್ನುತ್ತಾರೆ. ನಿಡಿ. 14 ಮತ್ತು 15 ಅಲಿನೇಶನ್ ನಂ. 172/1996-97 ಕ್ಕೆ ಸಂಬಂಧಿಸಿದ್ದು ಅಲಿನೇಶನ್ ನಂ.67/1996-97 ಸಂಬಂಧಿಸಿದ್ದಲ್ಲ ಎಂದರೆ ಇರಬಹುದು. ನಿಡಿ. 16 ಮತ್ತು 17 ಅಲಿನೇಶನ್ ನಂ. 172/1996-97 ಸಂಬಂಧಿಸಿರುತ್ತದೆ ಎಂದರೆ ಅದು ಪಂಚಾಯಿತಿ ದಾಖಲೆ ಎನ್ನುತ್ತಾರೆ. ನಿಡಿ. 12 ರಿಂದ 17 ರ ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಿಡಿ. 3 ಇ.ಸಿ 2004-22 ರ ವರೆಗೆ ಇರುವ ದಾಖಲೆ ಎಂದರೆ ಸರಿ.2022 ರಿಂದ ಸಾಕ್ಷಿ ವಿಚಾರಣೆಗೆ ಕೊಡುವ ವರೆಗಿನ ಇ.ಸಿ ಕೊಡಲು ಯಾವುದೆ ತೊಂದರೆ ಇಲ್ಲ. ನಿಡಿ. 53 ರನ್ನು ಕರ್ನಾಟಕ ಬ್ಯಾಂಕ್ ಗೆ ಪ್ಲೆಡ್ಜ್ ಮಾಡಿದ ಬಗ್ಗೆ ನಮೂದು ಇದ್ದು, ಅದನ್ನು ರಿಲೀಜ್ ಮಾಡಿಕೊಂಡ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಾನು ಹಾಜರು ಪಡಿಸಿದ ಅರ್.ಟಿ.ಸಿ ಗಳನ್ನು 2020-21 ರ ನಂತರದ ಆರ್.ಟಿ.ಸಿಗಳು ಅದಕ್ಕೂ ಮೊದಲಿನ ಆರ್.ಟಿ.ಸಿಗಳನ್ನು ತಂದು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಅಲಿನೇಶನ್ ಆದ ನಂತರ ಆರ್.ಟಿ.ಸಿಗಳು ಇರುವುದಿಲ್ಲ ಎನ್ನುತ್ತಾರೆ. 2018-19 ನೇ ಸಾಲಿನಲ್ಲಿ ಸದರಿ ದಾವಾ

ಸ್ವತ್ತಿನ ಆರ್.ಟಿ.ಸಿಗಳು ವಾದಿ ಮತ್ತು ಅವರ ಕುಟುಂಬದವರ ಜಂಟಿ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಎ.ಸಿ ರವರ ತಪ್ಪಿನಿಂದ ಅದು ಆ ರೀತಿ ಆಗಿರುತ್ತದೆ ಆದರೆ ಅಲಿನೇಶನ್ ಅದನಂತರ ಆರ್.ಟಿ.ಸಿ ಬರುವುದಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.